# ಶ್ರೀ ಗಣೇಶಮೂರ್ತಿ ಶಾಸ್ತ್ರಕ್ಕನುಸಾರ ಮತ್ತು ಸಾತ್ತ್ವಿಕವಾಗಿರಬೇಕು !

## ಮನೋಗತ

‘ಗಣಪಯ್ಯ ಬರುತ್ತಾನೆ... ಜಗಕೆ ಶಾಂತಿ ತರುತ್ತಾನೆ...’ ನಮ್ಮ ಅಚ್ಚುಮೆಚ್ಚಿನ ಗಣಪತಿಯ ಆಗಮನದ ಉತ್ಸುಕತೆಯು ಆಬಾಲವೃದ್ಧರಲ್ಲಿ ಭಾದ್ರಪದಕ್ಕಿಂತ ತುಂಬಾ ಮೊದಲಿನಿಂದಲೇ ಪ್ರಾರಂಭವಾಗುತ್ತದೆ. ಶ್ರೀ ಗಣೇಶಮೂರ್ತಿಯನ್ನು ತಯಾರಿಸುವುದರೊಂದಿಗೆ ಗಣೇಶೋತ್ಸವದ ಸಿದ್ಧತೆಯು ಪ್ರಾರಂಭವಾಗುತ್ತದೆ. ಗಣೇಶೋತ್ಸವವಂತೂ ಆನಂದೋತ್ಸವವೇ ಆಗಿದೆ, ಅಲ್ಲದೆ ಅದರ ಜೊತೆಗೆ ದೊಡ್ಡ ಪ್ರಮಾಣದಲ್ಲಿ ಗಣೇಶತತ್ತ್ವದ ಲಾಭವನ್ನು ಪಡೆದುಕೊಳ್ಳುವ ಸುವರ್ಣಾವಕಾಶವೂ ಆಗಿದೆ.

ಶ್ರೀ ಗಣೇಶಮೂರ್ತಿಯು ಸಾತ್ತ್ವಿಕ, ಅರ್ಥಾತ್ ಧರ್ಮಶಾಸ್ತ್ರಕ್ಕನುಸಾರ ಇದ್ದರೆ ಮಾತ್ರ ನಮಗೆ ದೊಡ್ಡ ಪ್ರಮಾಣದಲ್ಲಿ ಗಣೇಶತತ್ತ್ವದ ಲಾಭವಾಗುತ್ತದೆ. ಸದ್ಯ ಗರುಡನ ಮೇಲೆ ಕುಳಿತ ಗಣೇಶ, ಕ್ರಿಕೆಟ್ ಆಡುವ ಗಣೇಶ ಇಂತಹ ವಿವಿಧ ರೂಪಗಳಲ್ಲಿ ಮತ್ತು ದೊಡ್ಡ ದೊಡ್ಡ ಆಕಾರಗಳಲ್ಲಿ ಗಣೇಶ ಮೂರ್ತಿಗಳನ್ನು ತಯಾರಿಸಲಾಗುತ್ತದೆ. ಇಂತಹ ಅಶಾಸ್ತ್ರೀಯ ಮೂರ್ತಿಗಳಿಂದ ಗಣೇಶತತ್ತ್ವದ ಲಾಭವಂತೂ ಆಗುವುದೇ ಇಲ್ಲ, ಅದರ ಬದಲಿಗೆ ಶ್ರೀ ಗಣೇಶನ ಅನಾದರ ಮಾತ್ರ ಆಗುತ್ತದೆ. ಈ ಅನಾದರಕ್ಕೆ ಗಣೇಶೋತ್ಸವ ಮಂಡಳಿಗಳು,

ಮೂರ್ತಿಕಾರರು ಮತ್ತು ಭಕ್ತರು ಕಾರಣರಾಗುತ್ತಾರೆ. ಈ ಅನಾದರದಿಂದ ಹಿಂದೂಗಳಿಗೆ ಸಮಷ್ಟಿ ಪಾಪ ತಗಲುತ್ತದೆ. ಈ ಸಮಷ್ಟಿ ಪಾಪ ತಗಲಬಾರದು ಮತ್ತು ಗಣೇಶನ ಉಪಾಸನೆಯು ಯೋಗ್ಯರೀತಿಯಲ್ಲಿ ಆಗಬೇಕು ಎಂಬ ಉದ್ದೇಶದಿಂದ ಪ್ರಸ್ತುತ ಕಿರುಗ್ರಂಥದಲ್ಲಿ ಶ್ರೀ ಗಣೇಶಮೂರ್ತಿಯನ್ನು ಶಾಸ್ತ್ರಕ್ಕನುಸಾರ ತಯಾರಿಸುವುದರಿಂದ ಆಗುವ ಲಾಭಗಳು; ಮೂರ್ತಿಕಾರರು, ಭಕ್ತರು, ಹಾಗೆಯೇ ಗಣೇಶೋತ್ಸವ ಮಂಡಳಿಗಳು ವಹಿಸಬೇಕಾದ ಜಾಗ್ರತೆ ಮುಂತಾದವುಗಳ ಬಗ್ಗೆ ವಿವೇಚನೆಯನ್ನು ಮಾಡಲಾಗಿದೆ.

ಸನಾತನ ಸಂಸ್ಥೆಯು ನಿರ್ಮಿಸಿದ ಗಣೇಶಮೂರ್ತಿಯು ಹೇಗೆ ಸಾತ್ತ್ವಿಕ ಮತ್ತು ಆದರ್ಶವಾಗಿದೆ, ಎಂಬುದನ್ನು ತಿಳಿಸಿ ಅದನ್ನು ತಯಾರಿಸಲು ಆವಶ್ಯಕವಿರುವ ಅಳತೆಗಳನ್ನೂ ಈ ಕಿರುಗ್ರಂಥದಲ್ಲಿ ಕೊಡಲಾಗಿದೆ. ಈ ಅಳತೆಗಳಿಗನುಸಾರ ಸಾತ್ತ್ವಿಕ ಶ್ರೀ ಗಣೇಶಮೂರ್ತಿಯನ್ನು ತಯಾರಿಸಿ ಅದನ್ನು ಯಾವಾಗಲೂ ಮನೆಯಲ್ಲಿಡುವುದು ಲಾಭದಾಯಕವಾಗಿದೆ.

ಈ ಕಿರುಗ್ರಂಥದಲ್ಲಿರುವಂತೆ ಆಚರಣೆಯನ್ನು ಮಾಡಿ ಎಲ್ಲರಿಗೂ ಶ್ರೀ ಗಣೇಶನ ಅಧಿಕಾಧಿಕ ಆಶೀರ್ವಾದ ಪಡೆದುಕೊಳ್ಳಲು ಸಾಧ್ಯವಾಗಲೆಂದು ಶ್ರೀ ಗುರುಚರಣಗಳಲ್ಲಿ ಪ್ರಾರ್ಥನೆ ! - **ಸಂಕಲನಕಾರರು**

# ಅನುಕ್ರಮಣಿಕೆ

(ಕೆಲವು ಮಹತ್ವದ ಅಂಶಗಳನ್ನು ‘*’ ಈ ಗುರುತಿನಲ್ಲಿ ಕೊಡಲಾಗಿದೆ.)


卐 ಸಂಕಲನಕಾರರ ವೈಜ್ಞಾನಿಕ ದೃಷ್ಟಿಕೋನ ೭

卐 ಮನೋಗತ ೧೧

卐 ಆಧ್ಯಾತ್ಮಿಕ ಪರಿಭಾಷೆಯಲ್ಲಿನ ಪ್ರಸ್ತಾವನೆ ! ೧೩

---

೧. ಸಾತ್ತ್ವಿಕ ಮೂರ್ತಿ ಮತ್ತು ಅದರ ಲಾಭಗಳು ೧೫

೨. ಶ್ರೀ ಗಣೇಶ ಚತುರ್ಥಿಯಂದು ಪೂಜಿಸಬೇಕಾದ ಮೂರ್ತಿಯು ಹೇಗಿರಬೇಕು ? ೧೬

* ‘ಅಥರ್ವಶೀರ್ಷ’ದಲ್ಲಿ ವರ್ಣಿಸಿದ ಶ್ರೀ ಗಣೇಶನ ಮೂರ್ತಿವಿಜ್ಞಾನ ೧೭

* ಜೇಡಿಮಣ್ಣು ಅಥವಾ ಆವೆಮಣ್ಣಿನಿಂದ ಮೂರ್ತಿಯನ್ನು ತಯಾರಿಸಬೇಕು ೧೮

* ಚಿಕ್ಕ ಆಕಾರದ ಮೂರ್ತಿ (ಒಂದರಿಂದ ಒಂದೂವರೆ ಅಡಿ ಎತ್ತರ) ಇರಬೇಕು ! ೨೩

೩. ಸನಾತನ ನಿರ್ಮಿತ ಸಾತ್ತ್ವಿಕ ಶ್ರೀ ಗಣೇಶಮೂರ್ತಿಯ ವೈಶಿಷ್ಟ್ಯಗಳು ಮತ್ತು ಅದರ ಉಪಯುಕ್ತತೆ ೩೧

* ಸನಾತನದ ಶ್ರೀ ಗಣೇಶಮೂರ್ತಿಯ ಅಳತೆಗಳು ೩೬

**೪. ಗಣೇಶಮೂರ್ತಿಯನ್ನು ತಯಾರಿಸುವಾಗ ಇಡಬೇಕಾದ ಭಾವ, ಮಾಡಬೇಕಾದ ಪ್ರಾರ್ಥನೆ ಮತ್ತು ಪಾಲಿಸಬೇಕಾದ ನಿಯಮಗಳು ೪೧**

೪ ಅ. ಮೂರ್ತಿಯನ್ನು ತಯಾರಿಸುವಾಗ ಭಾವ ಹೇಗಿರಬೇಕು ? ೪೧

೪ ಆ. ಮೂರ್ತಿಕಾರರು ಮೂರ್ತಿಶಾಲೆಯಲ್ಲಿ ಪಾಲಿಸಬೇಕಾದ ಕೆಲವು ನಿಯಮಗಳು ೪೫

೪ ಇ. ಮೂರ್ತಿಕಾರರಿಗೆ ಉಪಯುಕ್ತ ಸೂಚನೆಗಳು ೪೬

**೫. ಗಣೇಶಭಕ್ತರೇ, ಧರ್ಮಶಾಸ್ತ್ರಕ್ಕನುಸಾರ ವರ್ತಿಸುವುದೇ ನಿಜವಾದ ಧರ್ಮಾಚರಣೆಯಾಗಿದೆ ! ೫೬**

**೬. ಗಣೇಶೋತ್ಸವ ಮಂಡಳಿಗಳೇ, ಗಣೇಶೋತ್ಸವವನ್ನು ಲೋಕಕಲ್ಯಾಣಕ್ಕಾಗಿ ಆಚರಿಸಿರಿ ! ೬೦**

**೭. ಸನಾತನದ ‘ಗಣೇಶೋತ್ಸವ ಜನಜಾಗೃತಿ ಚಳುವಳಿ’ ೬೪**

**೮. ಸನಾತನದ ಗಣೇಶಮೂರ್ತಿಯಂತೆ ಮೂರ್ತಿಗಳನ್ನು ತಯಾರಿಸಲು ಪ್ರಯತ್ನಿಸುವ ‘ಶ್ರೀ ಗಣೇಶ ಕಲಾ ಕೇಂದ್ರ ! ೭೦**